

# ‘ನಾಲ್ಕಾಣೆ’

## ವಾರಾಣಸಿ ರಾಮಕೃಷ್ಣ ಸೇವಾಶ್ರಮದ ಆರಂಭದ ಕಥೆ

**ಸ್ವಾಮಿ ಮಂಗಳಾತ್ಮಾನಂದ**

### ಭಾಗ ೧

ರಾಮಕೃಷ್ಣ ಮಹಾಸಂಘ ಆರಂಭಗೊಂಡ ಕೆಲವೇ ವರ್ಷಗಳಲ್ಲಿ ಆಧ್ಯಾತ್ಮಿಕ ಹಾಗೂ ಸೇವಾಕೇಂದ್ರಗಳಾಗಿ ಕಾರ್ಯಪ್ರವೃತ್ತವಾದ ಹಳೆಯ ಆಶ್ರಮಗಳಲ್ಲೊಂದು ವಾರಾಣಸಿ ರಾಮಕೃಷ್ಣ ಸೇವಾಶ್ರಮ. ಈ ಆಶ್ರಮವು ಆರಂಭಗೊಂಡ ಹಿನ್ನೆಲೆ, ಅದಕ್ಕೆ ಪ್ರಮುಖ ಉಪಕರಣವಾದ ವ್ಯಕ್ತಿಗಳು, ಮುಂದೆ ಈ ಕೇಂದ್ರವು ಬೆಳೆದ ಬಗೆ ಇವನ್ನು ಇಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. ಲೇಖಕರು ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

‘‘ಮಗು, ನಾಲ್ಕು ದಿನಗಳಿಂದ ಏನೂ ತಿಂದಿಲ್ಲ, ಏನಾದರೂ ಕೊಡು’’ ಮನುಷ್ಯ ಪ್ರಾಣಿಯಿಂದ ಬಂದ ಕೀರಲು ಧ್ವನಿ. ಕಾಶೀಧಾಮದ, ಬಂಗಾಲತೊಲ ಗಲ್ಲಿಯ ಕಿರಿದಾದ ರಸ್ತೆಯ ಅರೆಗತ್ತಲಿಂದ ಬಂದ ಧ್ವನಿಯದು. ಒಬ್ಬ ಸಂಸ್ಕೃತ ವಿದ್ಯಾರ್ಥಿ ನಡೆದುಕೊಂಡು ಹೋಗುತ್ತಿದ್ದ. ಅಲ್ಲಿಯೇ ಅವನು ಕಲಿಯುತ್ತಿದ್ದ ಪಾಠಶಾಲೆ ಇದ್ದುದರಿಂದ ಆ ವಿದ್ಯಾರ್ಥಿ ಮುಂಜಾನೆ ಸ್ನಾನಕ್ಕೆಂದು ಗಂಗಾನದಿಯ ಕಡೆ ಹೋಗುತ್ತಿದ್ದಾಗ, ಈ ಕೀರಲು ಧ್ವನಿ ಆತನ ಕಿವಿಗೆ ಬಿತ್ತು. ವಿದ್ಯಾರ್ಥಿಯು ಇಣಿಕಿ ನೋಡಿದ! ದಾರಿಹೋಕರು ನಡೆದಾಡುತ್ತಿದ್ದರೂ ಕೂಡ ಯಾರೂ ಈ ವೃದ್ಧೆಗೆ ಸಹಕರಿಸುತ್ತಿಲ್ಲ. ವೃದ್ಧೆಯ ಹತ್ತಿರ ಹೋದ. ಸ್ವ-ಮಲಮೂತ್ರಗಳಲ್ಲಿ ಬಿದ್ದು ಒದ್ದಾಡುತ್ತಿದ್ದ ಆ ಜೀವದ ಮೈಯಿಂದ ದುರ್ನಾತ ಬರುತ್ತಿದೆ! ದಾರಿಹೋಕರ ಹೃದಯ ಮಿಡಿಯದಿದ್ದರೂ ಈ ವಿದ್ಯಾರ್ಥಿಯ ಹೃದಯ ಮಮ್ಮಲ ಮರುಗಿತು. ಇದು ಸ್ವಾಮಿ ವಿವೇಕಾನಂದರ ಪ್ರವಚನದ ಪ್ರಭಾವ. ಈ ವಿದ್ಯಾರ್ಥಿಯು ಪುಂಥಿಯಾ ರಾಣಿ ಕಟ್ಟಿಸಿದ ಧರ್ಮಛತ್ರದಲ್ಲಿ ವಾಸವಾಗಿದ್ದ. ಕೈಯಲ್ಲಿ ಕವಡೆ ಕಾಸಿಲ್ಲ. ಈತನೇ ವಾರಾನ್ನದಿಂದ ಬದುಕುತ್ತಿದ್ದ. ಅವರಿವರನ್ನು ಬೇಡಿಕೊಂಡ. ಕೆಲವರು ‘ನಿನಗ್ಯಾಕೆ ಈ ಉಸಾಬರಿ, ಸಾಯಲಿ ಬಿಡು’ ಬಿಟ್ಟಿ ಉಪದೇಶ ಬಂತು! ಆ ವಿದ್ಯಾರ್ಥಿಯು ಹದಿನೆಂಟರ ಯುವಕ. ಯುವಕನು ವೃದ್ಧೆಯನ್ನು ಎತ್ತಿಕೊಂಡು ಹೋಗಿ ಗಂಗಾನದೀ ದಡದಲ್ಲಿ ಸ್ನಾನ ಮಾಡಿಸಿದ. ತನ್ನ ಉತ್ತರೀಯವನ್ನೇ ಹೊದೆಸಿದ. ವೃದ್ಧೆಯ ಹಸಿವು ನೀಗಿಸಬೇಕು, ಔಷಧಿ ಕೊಡಬೇಕು. ಗಂಗಾನದಿಯ ದಡದಲ್ಲಿ ಒಬ್ಬ ಸಜ್ಜನರು ಹೋಗುತ್ತಿದ್ದರು. ಯುವಕ ಅವರನ್ನು ಬೇಡಿದ. ‘‘ಈ ವೃದ್ಧೆಗೆ ಊಟ ಕೊಡಿಸುತ್ತೇನೆ. ಒಂದೆರಡಾಣೆ ಕೊಡಿ.’’ ಆ ಸಜ್ಜನ ಈ ಗೌರವರ್ಣದ, ಬ್ರಹ್ಮತೇಜಸ್ಸಿನ ವಿದ್ಯಾರ್ಥಿಯನ್ನು ನಿಂತು ನೋಡಿದ. ಆತನಿಗೇನು ಅನಿಸಿತೋ, ಕಿಸೆಯಿಂದ ಬೆಳ್ಳಿಯ ನಾಲ್ಕಾಣೆಯನ್ನು ತೆಗೆದು ಕೊಟ್ಟ. ತಡಮಾಡದೆ ವಿದ್ಯಾರ್ಥಿಯು ಸ್ವಲ್ಪ ಹಾಲು ಮತ್ತು ಹಲ್ವ (ಬೇಯಿಸಿದ ರವೆ) ತಂದು ವೃದ್ಧೆಗೆ ತಿನ್ನಿಸಿದ. ರೋಗಿಯು ನಿಧಾನವಾಗಿ ಕಣ್ಣು ತೆರೆದಳು! ಬಡ ಪ್ರಾಣಿಯ ಜೀವ ಒಂದು ಉಳಿಯಿತು. ರೋಗಿಯ ಹೆಸರು ನೃತ್ಯಕಾಲೀದಾಸಿ. ಯುವ ವಿದ್ಯಾರ್ಥಿಯ ಹೆಸರು ಯಾಮಿನೀ ರಂಜನ. ಕಾಶೀಧಾಮದಲ್ಲಿ ನಾಲ್ಕಾಣೆಯಿಂದಲೇ ರಾಮಕೃಷ್ಣ ಮಿಷನ್ ಸೇವಾಶ್ರಮ ಪ್ರಾರಂಭವಾದದ್ದು!

‘‘ಈ ಜೀವನ ಕ್ಷಣಿಕ, ಸುಖಭೋಗಗಳು ನಶ್ವರ. ಯಾರು ಪರರಿಗಾಗಿ ಬಾಳುತ್ತಾರೋ ಅವರು ಜೀವಂತವಾಗಿರುತ್ತಾರೆ. ಉಳಿದವರು ಬದುಕಿದ್ದರೂ ಜೀವಚ್ಛವದ ಹಾಗೆ. ಏನನ್ನೂ ನಿಮಗಾಗಿ ಇಚ್ಛಿಸಬೇಡಿ. ಎಲ್ಲವನ್ನೂ ಇತರರಿಗಾಗಿ ಮಾಡಿ – ಇದೇ ದೇವರೊಡನೆ ಜೀವಿಸುವುದು. ದೇವರೊಡನೆ ನಡೆದಾಡುವುದು, ಕೊನೆಗೆ ಭಗವಂತನನ್ನು ಹೊಂದುವುದು.’ — ಇವು ಸ್ವಾಮಿ ವಿವೇಕಾನಂದರ ಪರಮೋಕ್ತಿಗಳು.



ಕಾಶೀಧಾಮದ ಒಂದು ಪ್ರದೇಶವಾದ ಬಂಗಾಲಿತೋಲದಲ್ಲಿ ಒಂದು ಯುವಕರ ಗುಂಪು ಇತ್ತು. ಚಾರುಚಂದ್ರನೇ ಇವರಿಗೆಲ್ಲ ನಾಯಕ. ಚಾರುಚಂದ್ರ, ಯಾಮಿನೀರಂಜನ, ಕೇದಾರನಾಥ, ಹರಿನಾಥ, ಬ್ರಹ್ಮಚಾರಿ ನಿಗಮಾಚಾರಿ, ಜ್ಞಾನೇಂದ್ರನಾಥ, ಹರಿದಾಸ, ಜಗತ್ ದುರ್ಲಭ ಹೀಗೆ ಇನ್ನೂ ಕೆಲವರು ಯುವಕರು ಇದ್ದರು. ಚಾರುಚಂದ್ರನು ಇವರಿಗೆಲ್ಲ ಸ್ವಾಮಿ ವಿವೇಕಾನಂದರ ಬಗ್ಗೆ ತರಗತಿ ಮಾಡುತ್ತಿದ್ದ. ಅವರದೇ ಆದ ಒಂದು ಗ್ರಂಥಾಲಯವಿತ್ತು. ಇವರಲ್ಲಿ ಕೇದಾರನಾಥ ಮುಂದೆ ಸ್ವಾಮಿ ಅಚಲಾನಂದರಾಗಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರೂ ಆಗಿದ್ದರು. ಇವರೇ ಸೇವಾಶ್ರಮಕ್ಕೆ ಕಾರಣಕರ್ತೃ. ಹರಿದಾಸ, ಸ್ವಾಮಿ ಸದಾಶಿವಾನಂದರಾದರು.

ಯಾಮಿನೀರಂಜನನು ನಡೆದ ಘಟನೆಯನ್ನು ವಿವರಿಸಿದಾಗ, ಚಾರುಚಂದ್ರನು ಆಶ್ಚರ್ಯಚಕಿತನಾಗಿ ಹೇಳಿದ, ''ಈ ಪವಿತ್ರವಾದ ಕ್ಷೇತ್ರದಲ್ಲಿ ದುರ್ಗುಣಗಳು, ಸುಗುಣಗಳು ಒಟ್ಟೊಟ್ಟಿಗೆ ಹರಿದಾಡುತ್ತಿವೆ.'' ಆ ಕ್ಷಣದಲ್ಲಿಯೆ ಚಾರುಚಂದ್ರನು ತನ್ನ ಮನಸ್ಸಿನೊಳಗೆ ಒಂದು ದೃಢ ನಿರ್ಧಾರವನ್ನು ತೆಗೆದುಕೊಂಡ!

ಈ ವೃದ್ಧ ಮಹಿಳಾರೋಗಿಯನ್ನು ನೋಡಲು ಮಿತ್ರಬಳಗವೆಲ್ಲ ಸೇರಿತು. ರೋಗಿಯ ಹೆಚ್ಚಿನ ಚಿಕಿತ್ಸೆಗಾಗಿ ಭೇಲುಪುರದ ಸರಕಾರಿ ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಿದರು. ಡಾಕ್ಟರ್ ಹೇಳಿದರು, ರೋಗಿಯ ಔಷಧೋಪಚಾರಕ್ಕಾಗಿ ನಾಲ್ಕು ರೂಪಾಯಿಗಳನ್ನು ಮುಂಗಡ ಜಮಾ ಮಾಡಬೇಕೆಂದು. ಕೈಯಲ್ಲಿ ರೊಕ್ಕವಿಲ್ಲದ ಯುವಕರು ಮಾಡುವುದಾದರೂ ಏನು?

ರೋಗಿಗೆ ಆಹಾರ ಕೊಡಲು ಯಾರೂ ಒಪ್ಪದಿದ್ದಾಗ, ಯಾಮಿನಿರಂಜನನು ತಾನು ತಂಗುತ್ತಿದ್ದ ಧರ್ಮಛತ್ರದ ವ್ಯವಸ್ಥಾಪಕರನ್ನು ಬೇಡಿದ. ವ್ಯವಸ್ಥಾಪಕರು ಹೇಳಿದರು – ಇಲ್ಲ ವಿದ್ಯಾರ್ಥಿಗಳಿಗೆ ಮಾತ್ರ ಕೊಡಲಾಗುವುದು, ಇತರರಿಗಲ್ಲ. ಯಾಮಿನಿ ರಂಜನನು ಕಾಡಿಬೇಡಿ ವ್ಯವಸ್ಥಾಪಕರನ್ನು ಒಪ್ಪಿಸಿ ತನ್ನ ಪಾಲಿನ ಊಟವನ್ನು ಕೊಂಡು ಹೋಗಿ, ರೋಗಿಗೆ ಉಣಿಸಿ ತಾನು ಉಪವಾಸ ಇದ್ದ. ಯಾಮಿನೀರಂಜನನ ಕೆಲವು ಗೆಳೆಯರು ಆತನಿಗೆ ಊಟ ಕೊಟ್ಟರು.

ರೋಗಿಯನ್ನು ಎರಡು ದಿನ ರಸ್ತೆ ಬದಿಯ ಜಗಲಿ ಮೇಲೆ ಮಲಗಿಸಿ, ಅಲ್ಲಿಯೆ ಶುಶ್ರೂಷೆ ಮಾಡಿದರು. ಹೆಸರಾಂತ ವಿದ್ವಾಂಸ ಗೋವಿಂದಚಂದ್ರ ವಾಚಸ್ಪತಿಯವರಲ್ಲಿ ಸಹಾಯ ಕೇಳಿದರು. ಪಂಡಿತರು ಹೇಳಿದರು – ''ವಿಳಾಸವಿಲ್ಲದ ರೋಗಿಯನ್ನು ಹಾಗೆ ಇಟ್ಟುಕೊಳ್ಳುವ ಮೊದಲು, ಸ್ಥಳೀಯ ಪೋಲಿಸ್ ಠಾಣೆಗೆ ಮೊದಲು ಹೇಳಿ. ಇಲ್ಲದಿದ್ದರೆ, ಮುದುಕಿಯ ಸಂಪತ್ತಿಗಾಗಿ, ಯುವಕರು ಮುದುಕಿಯನ್ನು ಕೊಂದಿದ್ದಾರೆ ಎಂದು ದಾವೆ ಹೂಡಬಹುದು.'' ಠಾಣೆಗೆ ಹೋಗಿ ಸಬ್‌ಇನ್ಸ್‌ಪೆಕ್ಟರ್‌ಗೆ ಹೇಳಿದರೆ ಆತ ಹೇಳಿದ: ''ಇದ್ದಲ್ಲಿಯೆ ಇರಲಿ, ಅವಳಿಗೆ ಕೊಠಡಿ ಬೇಕಾದರೆ ನೀವೇ ವ್ಯವಸ್ಥೆ ಮಾಡಿ'' ಪೋಲೀಸನ ದರ್ಪದ ಮಾತು ಕೇಳಿ ಯಾಮಿನೀರಂಜನ ಪೆಚ್ಚುಮೋರೆ ಹಾಕಿ ಹಿಂದಿರುಗಿದ.


ಯಾಮಿನೀರಂಜನನು ಸಂಜೆ ಬಂದು ನೋಡುತ್ತಾನೆ ರೋಗಿ ವಾಂತಿ–ಭೇದಿ ಮಾಡಿಕೊಂಡು ಕೊಚ್ಚೆ ಬದಿಯಲ್ಲಿ ಮಲಗಿದ್ದಾಳೆ. ರೋಗಿಗೆ ಸ್ನಾನ ಮಾಡಿಸಬೇಕೆಂದು ಯೋಚಿಸುವಾಗ, ಸಾಕ್ಷಾತ್ ಅನ್ನಪೂರ್ಣೆ ಒಬ್ಬಾಕೆ ಯುವತಿಯ ರೂಪದಲ್ಲಿ ಬಂದಳು. ಯಾಮಿನೀರಂಜನನ ಪರಿಸ್ಥಿತಿಯನ್ನು ನೋಡಿ ಆ ಯುವತಿ, ರೋಗಿಯನ್ನು ಸ್ನಾನ ಮಾಡಿಸಿ, ಹೊಲಸು ಬಟ್ಟೆಗಳನ್ನು ತೆಗೆದು ಶುದ್ಧ ಮಾಡಿಕೊಟ್ಟಳು. ಬೇಡಿ ತಂದ ಬಟ್ಟೆ ಉಡಿಸಿದಳು. ಆ ಯುವತಿ ಬಹುಶಃ ದಾದಿ ವಿದ್ಯೆ ಕಲಿತಿದ್ದಳು. ಯುವತಿಯು ಹತ್ತೊಂಬತ್ತು ಪೈಸೆಗಳನ್ನು ಯಾಮಿನೀರಂಜನನ ಕೈಗೆ ಕೊಟ್ಟು ರೋಗಿಗೆ ಏನಾದರೂ ತಿನ್ನಿಸೆಂದು ಹೇಳಿ ಹೊರಟು ಹೋದಳು. ಆಶ್ಚರ್ಯವೆಂದರೆ ಅನಂತರ ಆ ಯುವತಿಯನ್ನು ಯಾರೂ ನೋಡಲಿಲ್ಲ! ಯುವಕನು ಮಾಡುವ ಸೇವೆಯನ್ನು ನೋಡಿ, ಅಲ್ಲಿಯೇ ಇದ್ದ ಶಿವಾನಂದ ಭಟ್ಟಾಚಾರ್ಯರೆಂಬ ಪಂಡಿತರು ಒಂದು ರೂಪಾಯಿ ಕೊಟ್ಟರು. ಆ ಹಣದಿಂದ ರೋಗಿಯನ್ನು ಭೇಲುಪುರದ ಸರಕಾರಿ ಆಸ್ಪತ್ರೆಗೆ ಸೇರಿಸಿದರು.

ವೃದ್ಧೆ (ರೋಗಿ) ನೃತ್ಯಕಾಲೀದಾಸಿಯು ವಂಗ ದೇಶದಿಂದ ತನ್ನ ಇಳಿ ವಯಸ್ಸಿನಲ್ಲಿ ಮುಕ್ತಿ ಪಡೆಯುವ ಉದ್ದೇಶದಿಂದ ಕಾಶೀಧಾಮಕ್ಕೆ ಬಂದಿದ್ದಳು. ಕಾಶೀಧಾಮಕ್ಕೆ ಬಂದ ಮೇಲೆ ಗೊತ್ತಾಯಿತು, ಇರುವುದಾದರೂ ಎಲ್ಲಿ, ಊಟ ಕೊಡುವವರು ಯಾರು? ಆಗಿನ ಕಾಲದಲ್ಲಿ (೧೯೦೦) ಕಾಶಿಯಲ್ಲಿ ವೃದ್ಧಾಶ್ರಮಗಳೇ ಇರಲಿಲ್ಲ. ಭಾರತೀಯರಿಗೆ ವೃದ್ಧಾಶ್ರಮದ ಪರಿಚಯ ಕೂಡ ಇರಲಿಲ್ಲ. ಈಗ (೨೦೨೩) ಕಾಶೀಧಾಮದಲ್ಲಿ ಹಲವಾರು ಅನಾಥಾಶ್ರಮ, ವೃದ್ಧಾಶ್ರಮಗಳು ತಲೆಯೆತ್ತಿವೆ. ನೃತ್ಯಕಾಲಿಯು ಸುತ್ತಾಡುತ್ತ ಬಂಗಾಲಿತೊಲದಲ್ಲಿ ಒಬ್ಬ ಬ್ರಾಹ್ಮಣನ ಮನೆ ಸೇರಿದಳು. ತನ್ನಲ್ಲಿದ್ದ ನೂರಾಎಂಟು ರೂಪಾಯಿಗಳನ್ನು ಆ ಬ್ರಾಹ್ಮಣನಿಗೆ ಅರ್ಪಿಸಿದಳು. ಸಾಯುವ ತನಕ ಆತ ಊಟ ಕೊಡಬೇಕೆಂಬ ಒಪ್ಪಂದವಾಯಿತು. ಆದರೆ ಕಾಶೀಧಾಮದ ಅತಿಯಾದ ಸೆಖೆ ತಡೆದುಕೊಳ್ಳಲಾರದೆ ವೃದ್ಧೆಯು ಹಾಸಿಗೆ ಹಿಡಿದಳು. ಜ್ವರ ಮತ್ತು ಭೇದಿಯಿಂದ ಬಸವಳಿದ ಮುದುಕಿಯ ಸೇವೆ ಮಾಡುವವರಾರು? ಕುಹುಕ ಬುದ್ಧಿಯ ಬ್ರಾಹ್ಮಣನು ಯೋಚಿಸಿದ – ಈ ಮುದುಕಿಯನ್ನು ಹೊರಹಾಕಿದರೆ ಅವಳ ಹಣವನ್ನಾದರೂ ಕಬಳಿಸಬಹುದು. ಈ ದುರುದ್ದೇಶದಿಂದ, ಅರೆ ಪ್ರಜ್ಞೆಯಲ್ಲಿ ಮಲಗಿದ್ದ ಮುದುಕಿಯನ್ನು ಒಂದು ದಿನ ರಾತ್ರಿ ರಸ್ತೆ ಬದಿಯ ಜಗಲಿ ಮೇಲೆ ಮಲಗಿಸಿ ಹೊರಟುಹೋದ. ಈ ಕೃತ್ಯ ನಡೆದಾಗ ಮುದುಕಿಗೆ ಪ್ರಜ್ಞೆ ಇತ್ತು. ಅನಂತರ ತನ್ನ ಪ್ರಜ್ಞೆಯನ್ನು ಕಳೆದುಕೊಂಡಿದ್ದಳು. ಆ ಪರಿಸ್ಥಿತಿಯಲ್ಲಿಯೇ ಅವಳನ್ನು

ಯಾಮಿನೀರಂಜನನು ನೋಡಿದ್ದನು. ವೃದ್ಧಗೆ ಪ್ರಜ್ಞೆ ಬಂದಾಗ ಯಾಮಿನೀರಂಜನನು ಸೇವೆ ಮಾಡುತ್ತಿದ್ದ.


ಸ್ವಾಮಿ ವಿವೇಕಾನಂದರು ೧೮೯೭ರಲ್ಲಿ ಪಾಶ್ಚಾತ್ಯದೇಶಗಳಲ್ಲಿ ಜಯಭೇರಿ ಹೊಡೆದು, ದಿಗ್ವಿಜಯ ಮುಗಿಸಿ, ಕೋಲ್ಕತ್ತಾಗೆ ಬಂದಾಗ ಅವರ ಗಾಡಿಯ ಕುದುರೆಗಳನ್ನು ಕಳಚಿ ಗಾಡಿಗೆ ಹೆಗಲು ಕೊಟ್ಟ ಯುವಕರಲ್ಲಿ ಚಾರುಚಂದ್ರನೂ ಒಬ್ಬ. ಚಾರುಚಂದ್ರನು ಆಗಲೇ ದಕ್ಷಿಣೇಶ್ವರ, ಬೇಲೂರುಮಠಗಳಿಗೆ ಭೇಟಿ ಕೊಡುತ್ತಿದ್ದ; ದಕ್ಷಿಣೇಶ್ವರದ ಭವತಾರಿಣಿ ಮಂದಿರಕ್ಕೆ ಪ್ರತಿ ಮಂಗಳವಾರ ಹೋಗಿ ಧ್ಯಾನಾಭ್ಯಾಸ ಮಾಡುತ್ತಿದ್ದ. ಚಾರುಚಂದ್ರನ ಮಾತಾ-ಪಿತೃಗಳ ಅಪೇಕ್ಷೆ ವೃದ್ಧಾಪ್ಯದಲ್ಲಿ ಕಾಶೀಧಾಮದಲ್ಲಿ ಕಳೆಯಬೇಕೆಂದು. ೧೮೯೮ರಲ್ಲಿ ತನ್ನ ಮಾತಾಪಿತೃಗಳೊಡನೆ ಚಾರುಚಂದ್ರನು ಕಾಶೀಧಾಮಕ್ಕೆ ಬರುತ್ತಾನೆ ಮತ್ತು ಅವರ ಸೇವೆಗಾಗಿ ವಾರಣಾಸಿಯಲ್ಲಿ ಉಳಿದುಕೊಳ್ಳುತ್ತಾನೆ. ಚಾರುಚಂದ್ರನು ಒಂದು ದಿನ ರಸ್ತೆಯಲ್ಲಿ ನೋಡುತ್ತಾನೆ, ಸಂನ್ಯಾಸಿಗಳೊಬ್ಬರು ರಸ್ತೆಯಲ್ಲಿ ಭಿಕ್ಷೆ ಬೇಡುತ್ತಿದ್ದಾರೆ. ಹತ್ತಿರ ಹೋಗಿ ನೋಡಿದರೆ ಚಿರಪರಿಚಿತ ಸ್ವಾಮಿ ಶುದ್ಧಾನಂದಜಿ ಅವರು. ಆಗ ತಾನೆ ಕೈಲಾಸ ಮಾನಸ ಸರೋವರ ಯಾತ್ರೆ ಮುಗಿಸಿ ಕಾಶಿಗೆ ಬಂದಿದ್ದರು. ಸ್ವಾಮಿ ನಿರಂಜನಾನಂದಜಿ ಕೂಡ ಆಗ ಕಾಶೀಧಾಮದ ಸೋನಾಪುರದ ವಂಶೀದತ್ತರ ಮನೆಯಲ್ಲಿದ್ದರು. ಶುದ್ಧಾನಂದಜಿ ಅವರ ಮನೆಯಲ್ಲಿಯೆ ಉಳಿದುಕೊಂಡಿದ್ದರು. ಚಾರುಚಂದ್ರನು ವಂಶೀದತ್ತರ ಮನೆಗೆ ಹೋಗಿ ಸ್ವಾಮಿ ನಿರಂಜನಾನಂದರೊಡನೆ ಸ್ವಲ್ಪ ಸಮಯ ಇದ್ದು ಬರುತ್ತಿದ್ದ. ಶುದ್ಧಾನಂದರ ಆರೋಗ್ಯ ಕೆಟ್ಟು ಹೋದಾಗ ಚಾರುಚಂದ್ರನೇ ಸೇವೆ ಮಾಡುತ್ತಿದ್ದ. ಶುದ್ಧಾನಂದರ ಆರೋಗ್ಯ ಸುಧಾರಿಸಿ, ಅವರು ಬೇಲೂರು ಮಠಕ್ಕೆ ಹೋದರು. ಇದೇ ಕಾಲದಲ್ಲಿ ೧೮೯೯ರಲ್ಲಿ ಬೇಲೂರು ಮಠದ 'ಉದ್ಬೋಧನ' ಪತ್ರಿಕೆ ಪ್ರಕಟವಾಯಿತು. ಅದರ ಕೆಲವು ಪ್ರತಿಗಳನ್ನು ಶುದ್ಧಾನಂದಜಿಯವರು ಚಾರುಚಂದ್ರನಿಗೆ ಕಳುಹಿಸಿಕೊಟ್ಟು, ಪ್ರಚಾರ ಮಾಡಲು ಹೇಳಿದ್ದರು. ಈ ಉದ್ದೇಶದಿಂದಲೇ ಚಾರುಚಂದ್ರನು ಯುವಬಳಗ ಕೂಡಿಸಿ ಸದಸ್ಯರನ್ನು ಮಾಡಲು ಪ್ರಯತ್ನ ಮಾಡುತ್ತಿದ್ದ. ಪ್ರಾರಂಭದಲ್ಲಿ ಕೇದಾರದ ಮನೆಯಲ್ಲಿಯೇ ಈ ಯುವಬಳಗ ಸೇರುತ್ತಿತ್ತು. ಮತ್ತು ವಿವೇಕಾನಂದರ ಗ್ರಂಥಗಳ ಬಗ್ಗೆ, 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳ ಬಗ್ಗೆ ಚರ್ಚಿಸುತ್ತಿದ್ದರು.

ಅದೇ ಸಮಯದಲ್ಲಿ ಶ್ರೀರಾಮಕೃಷ್ಣರ ಜಯಂತಿ ಕೂಡ ಬಂದಿತ್ತು. ಯುವಕರಿಗೆಲ್ಲ ಪರಮಹಂಸರ ಪೂಜೆಯನ್ನು ಆ ದಿನ ಮಾಡಬೇಕೆಂದು ಉತ್ಕಟವಾದ ಆಸೆ. ಚಾರುಚಂದ್ರನು ಕಾಶೀಧಾಮಕ್ಕೆ ಬರುವಾಗ ಒಂದು ಪರಮಹಂಸರ ಫೋಟೋವನ್ನು ಜೊತೆಗೆ ತಂದಿದ್ದ. ಸ್ವಾಮಿ ನಿರಂಜನಾನಂದರಿಗೆ ಗುರುಮಹಾರಾಜರ ಪೂಜೆ ಮಾಡಲು ವಿನಂತಿಸಿದರು. ಕೇದಾರನಾಥನ ಮನೆಯಲ್ಲಿಯೆ ಶ್ರೀ ಗುರುಮಹಾರಾಜರ ಪಟವನ್ನು



ಸ್ವಾಮಿ ಶುಭಾನಂದ

ಅಲಂಕರಿಸಿದರು. ಕೇದಾರನಾಥನು ಅಲ್ಲಿ ತನಕ ಶ್ರೀರಾಮಕೃಷ್ಣರ ಛಾಯಾಚಿತ್ರವನ್ನೇ ನೋಡಿರಲಿಲ್ಲ. ಸ್ವಾಮಿ ನಿರಂಜನಾನಂದರು ಮನೆಗೆ ಬರುವ ಮೊದಲು ಕೇದಾರನಾಥನು ಅಲ್ಲಿ ಫೋಟೋವನ್ನು ಇಟ್ಟು ಪುಷ್ಪಮಾಲೆಗಳಿಂದ ಅಲಂಕರಿಸಿ, ಊದುಕಡ್ಡಿಗಳನ್ನು ಬೆಳಗಿಸುವಾಗ ಶ್ರೀಗುರುಮಹಾರಾಜರನ್ನು ತದೇಕ ಚಿತ್ತನಾಗಿ ನೋಡುತ್ತ ಎಷ್ಟೋ ಹೊತ್ತು ಹಾಗೆಯೇ ನಿಂತಿದ್ದ! ತನ್ನನ್ನು ತಾನೇ ಮರೆತಿದ್ದ! ಈತನೇ ಮುಂದೆ ಸ್ವಾಮಿ ಅಚಲಾನಂದರಾಗಿ, ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿ ಎಷ್ಟೋ ಜನರಿಗೆ ಮಂತ್ರೋಪದೇಶ ಮಾಡಿದ್ದರು. ಊದು ಕಡ್ಡಿ ಉರಿದ ಹಾಗೆ, ಶ್ರೀರಾಮಕೃಷ್ಣರು ಕೇದಾರನ ಹೃದಯದೊಳಗೆ ಹೊಕ್ಕು ಆತನ ಸಂಸಾರಾಸಕ್ತಿಯನ್ನು ಭಸ್ಮೀಭೂತ ಮಾಡಿದ್ದರು! ಆತನಿಗೆ ಬಾಹ್ಯ ಜ್ಞಾನ ಬಂದಿದ್ದಾಗ ಸ್ವಾಮಿ ನಿರಂಜನಾನಂದಜಿ ಬಂದಿದ್ದರು. ಅವರು ದೇವಮಾನವ ಶ್ರೀರಾಮಕೃಷ್ಣರ ಪೂಜೆ ನೆರವೇರಿಸಿ, ಅವರ ಬಗ್ಗೆ ಪ್ರವಚನವನ್ನು ಕೂಡ ಮಾಡಿದ್ದರು. ಅದೇ ಸಮಯದಲ್ಲಿ ಹರಿದ್ವಾರದಿಂದ ಸ್ವಾಮೀಜಿಯವರ ಶಿಷ್ಯ ಕಲ್ಯಾಣಾನಂದಜಿ ಕೂಡ ಬಂದು, ಕೇದಾರನ ಮನೆಯಲ್ಲಿ ತಂಗಿದ್ದರು. ಅವರು ಯುವಕರಿಗೆ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ವಿಚಾರವಾಗಿ ಜೀವಸೇವೆಯನ್ನು ಹೇಗೆ ಮಾಡಬೇಕೆಂದು ವಿವರಿಸಿ ಹೇಳಿದರು. ಯುವಕರಲ್ಲಿ ಗೊಂದಲಕ್ಕೆ ಕಾರಣವಾಗಿದ್ದ ಯೋಗ ಸಮನ್ವಯದ ಬಗ್ಗೆಯೂ ವಿವರವಾಗಿ ಹೇಳಿ, ಅವರ ಗೊಂದಲವನ್ನು ದೂರೀಕರಿಸಿದರು.



ಸ್ವಾಮಿ ಅಚಲಾನಂದ

ಹಸಿದವರ ಹೊಟ್ಟೆಗೆ ಹಿಟ್ಟು, ರೋಗಿಗೆ ಔಷಧಿ, ವಿದ್ಯಾರ್ಥಿಗಳಿಗೆ ವಿದ್ಯಾದಾನ, ನಿರ್ಗತಿಕರಿಗೆ ಸೂರಿನ ವ್ಯವಸ್ಥೆ, ಬಡವರಿಗೆ ಸಹಾಯ–ಇವುಗಳನ್ನು ಸ್ವಾಮಿ ವಿವೇಕಾನಂದರ ಗ್ರಂಥಗಳಿಂದ ಓದಿ ಯುವಕರು ಅರಿತುಕೊಂಡರು. ಯುವಕರು ಸೇರಿ ಒಂದು ದೃಢನಿರ್ಧಾರವನ್ನು ತೆಗೆದುಕೊಂಡರು. ಆ ನಿರ್ಧಾರವೇ ಸೇವಾಶ್ರಮದ ಹುಟ್ಟು. ಈ ಸಂಘಕ್ಕೆ 'ಹೋಮ್ ಆಫ್ ರಿಲೀಫ್' (Home of Relief) ಎಂದು ನಾಮಕರಣ ಮಾಡಿ, ಪದಾಧಿಕಾರಿಗಳನ್ನು ಕೂಡ ನೇಮಿಸಲಾಯಿತು. ಬ್ರಹ್ಮಚಾರಿ ಭೂಪೇಂದ್ರ ಭೂಷಣ ಕಾರ್ಯದರ್ಶಿ, ಯಾಮಿನೀರಂಜನ ಸಹಕಾರ್ಯದರ್ಶಿ, ಚಾರುಚಂದ್ರ ಖಜಾಂಚಿ, ಕೇದಾರನಾಥ ಮತ್ತಿತರ ಯುವಕರು ಸದಸ್ಯರಾಗಿ ನೇಮಕಗೊಂಡರು. ಇದರ ಕಾರ್ಯಾಲಯವು ಕೇದಾರನಾಥನ ಮನೆಯಲ್ಲಿಯೆ ಪ್ರಾರಂಭವಾಯಿತು ೩–೪ ಮಂದಿ ಯುವಕರು ಗೃಹಬಂಧನದಿಂದ ಸಂಪೂರ್ಣ ವಿಮುಕ್ತರಾದರು. ಕಾಶೀಧಾಮದ ರಸ್ತೆಯಲ್ಲಿ ಗಲ್ಲಿಗಲ್ಲಿಗಳಲ್ಲಿ ಬಿದ್ದುಕೊಂಡಿದ್ದ ರೋಗಿ, ನಿರ್ಗತಿಕರನ್ನು ಹುಡುಕಿ ಅವರಿಗೆ ಔಷಧಿ, ಬಟ್ಟೆ, ಆಹಾರ ಇತ್ಯಾದಿಗಳನ್ನು ಕೊಟ್ಟು, ಭಗವಂತನೇ ಈ ರೂಪಗಳಿಂದ ಇದ್ದಾನೆ ಎನ್ನುವ ಭಾವದಿಂದ ಜೀವಸ್ವರೂಪಗಳನ್ನು ಶಿವಸ್ವರೂಪದಿಂದ ಪೂಜೆ ಮಾಡಲಾರಂಭಿಸಿದರು.

ಈ ಜೀವಂತ ಶಿವ ಸ್ವರೂಪಿಗಳಿಗಾಗಿ ಯುವಕರು ನಾಚಿಕೆ, ಭಯ, ಸಂಕೋಚ, ಲಜ್ಜೆಗಳನ್ನು ಬಿಟ್ಟು ಮನೆಮನೆಗೆ ಹೋಗಿ ಬೇಡಲಾರಂಭಿಸಿದರು. ಹಳೆಯ ಬಟ್ಟೆ, ಉಳಿದಿದ್ದ ಆಹಾರ, ಧವಸಧಾನ್ಯ, ಒಂದೆರಡು ಕಾಸುಗಳನ್ನು ತಂದು ರೋಗಿಗಳ ಸೇವೆ ಮಾಡಲಾರಂಭಿಸಿದರು. ಇದೇ ಸಮಯದಲ್ಲಿ ರಸ್ತೆಯಲ್ಲಿ ಒಬ್ಬ ಹದಿನಾರರ ಯುವಕ ಬಿದ್ದುಕೊಂಡಿದ್ದಾನೆ – ಅವನಿಗೆ ಟೈಫಾಯಿಡ್ ಜ್ವರ. ಆತನನ್ನು ಎತ್ತಿಕೊಂಡು ಬಂದು ಕೇದಾರನ ಮನೆಯಲ್ಲಿ ಚಿಕಿತ್ಸೆ ಕೊಟ್ಟು, ಎದ್ದು ಓಡಾಡುವ ಹಾಗೆ ಮಾಡಿದರು. ಈ ಯುವಕನೇ ಮೊದಲ ಒಳರೋಗಿ. ಹೊರರೋಗಿ, ಒಳರೋಗಿಗಳ ಶುಶ್ರೂಷೆಗಾಗಿ ಬಹಳ ಮುಖ್ಯವಾಗಿ ಬೇಕಾದದ್ದು ಒಂದು ಕಟ್ಟಡ. ಈಗ ನಾವು ಕಾಶೀನಗರವನ್ನು ಹೇಗೆ ನೋಡುತ್ತಿದ್ದೇವೆಯೋ, ನೂರಾರು ವರ್ಷಗಳ ಮೊದಲು ಕೂಡ ಇದೇ ಪರಿಸ್ಥಿತಿ. ದಟ್ಟವಾದ, ಜನನಿಬಿಡವಾದ ಮನೆಗಳು, ಇವುಗಳ ಮಧ್ಯೆ ಕಿರಿದಾದ ಓಣಿಗಳು, ರಸ್ತೆಯಲ್ಲಿ ದಾರಿಯೇ ಸಾಗದಷ್ಟು ಭಕ್ತವೃಂದ. ಅಲ್ಲಿ ಇಲ್ಲಿ ಹುಡಕಾಡಿ ಕ್ರಿ.ಶ. ೧೯೦೦ನೇ ಸೆಪ್ಟೆಂಬರ್‌ನಲ್ಲಿ ಜಂಗಮವಾಡಿಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡರು; ಮಾಸಿಕ ಬಾಡಿಗೆ ಐದು ರೂಪಾಯಿಗಳು. ಹೋಮ್ ಆಫ್ ರಿಲೀಫ್ ಕಾರ್ಯಾಲಯವನ್ನು ಬಾಡಿಗೆ ಮನೆಗೆ ಸ್ಥಳಾಂತರಿಸಲಾಯತು. ಚಿಕ್ಕದಾದ ಮನೆಯಲ್ಲಿ ಹೋಮಿಯೋಪಥಿ, ಆಲೋಪತಿ, ಡಿಸ್ಪೆನ್ಸರಿ, ಒಳರೋಗಿಗಳಿಗೆ ಒಂದು ಕೊಠಡಿ ಮಾಡಲಾಯಿತು. ಈ ಮನೆ ಬಾಡಿಗೆಗಾಗಿ ಕೆಲ ಸಹೃದಯರು ದೇಣಿಗೆ ಕೊಟ್ಟರು. ಡಿಸ್ಪೆನ್ಸರಿಯಲ್ಲಿ ಕಾರ್ಯಾಲಯ, ರಾತ್ರಿಹೊತ್ತು ಮಲಗಲು ಕಾರ್ಯಾಲಯ; ಯಾಮಿನೀರಂಜನ ಮತ್ತು ಚಾರುಚಂದ್ರ ಇವರ ವಾಸ ಅಲ್ಲಿಯೇ ಆಯಿತು. ಚಾರುಚಂದ್ರನ ಮಿತ್ರರಾದ ಜಸ್ಟಿಸ್ ಮನ್ಮಥನಾಥ ಮುಖರ್ಜಿ, ಸುರೇಂದ್ರನಾಥ ಬೋಸ್, ಇವರುಗಳು ಚಾರುಚಂದ್ರನ ಕೆಲಸಗಳನ್ನು ನೋಡಿ, ಕೋಲ್ಕತ್ತಾದಲ್ಲಿ ದೇಣಿಗೆ ಸಂಗ್ರಹಿಸಿ ಚಾರುಚಂದ್ರನಿಗೆ ಕಳುಹಿಸಲಾರಂಭಿಸಿದರು.

೧೯೦೦ರ ಸೆಪ್ಟೆಂಬರ್ ತಿಂಗಳಲ್ಲಿ ಕಾರ್ಯಕಾರಿಣಿ ಸಭೆಯನ್ನು ಕರೆದರು. ಈ ಸಭೆಯಲ್ಲಿ ಕಾಶೀಧಾಮದ ಅತ್ಯಂತ ಗೌರವಾನ್ವಿತ ವ್ಯಕ್ತಿಗಳಾದ ಡಾ. ಮನ್ಮಥನಾಥ ಬೋಸ್, ಪ್ರಮದದಾಸ ಮಿತ್ರ ಬಹದ್ದೂರ್, ಶ್ರೀ ಸೋಮನಾಥ ಚೌಧುರಿ ಇವರುಗಳು ಭಾಗವಹಿಸಿ ಯುವಕರ ಸೇವಾಕಾರ್ಯಗಳನ್ನು ಬಹಳವಾಗಿ ಶ್ಲಾಘಿಸಿದರು. ಇದೇ ಸಭೆಯಲ್ಲಿ ಇದರ ಹೆಸರನ್ನು ಕೂಡ ಬದಲಾವಣೆ ಮಾಡಿದರು. 'ದಿ ಪೂವರ್ ಮೆಸ್ ರಿಲೀಫ್ ಅಸೋಸಿಯೇಷನ್' ಎಂಬ ಹೆಸರನ್ನು ಸರ್ವಾನುಮತದಿಂದ ಅನುಮೋದಿಸಿದರು. ಹೀಗೆ ಹೋಮ್ ಆಫ್ ರಿಲೀಫ್ ಹೋಗಿ ಹೊಸ ಹೆಸರು ಬಂತು. ಈ ಸಂದರ್ಭದಲ್ಲಿ ಸಂಸ್ಥೆಗೆ ಕೆಲವು ಹೊಸ ನಿಯಮಗಳನ್ನು ಕೂಡ ಅಳವಡಿಸಲಾಯಿತು. ಯುವಕರ ಹೆಗಲಿಗೆ ಹೆಚ್ಚಿನ ಹೊಣೆಗಾರಿಕೆ ಕೂಡ ಬಿತ್ತು. ಇಲ್ಲಿಯ ರೋಗಿಗಳಿಗೆ ಈ ಯುವಕರೇ ಹತ್ತಿರದ ಬಂಧುಗಳಾದರು; ಅವರಿಗೆ ಊಟ ಕೊಡುವುದು, ಬಟ್ಟೆ ತೊಳೆದುಕೊಡುವುದು, ರೋಗಿಗಳಿಗೆ ಅಡಿಗೆ ಮಾಡಿ

ಕೊಡುವುದು ಇತ್ಯಾದಿ. ಯುವಕರಿಂದಲೇ ಆಗುತ್ತಿತ್ತು. ರಸ್ತೆ ಬದಿಯಲ್ಲಿದ್ದ ಅಂಗವಿಕಲರಿಗೆ ಅಲ್ಲಿಯೆ ಔಷಧ, ಊಟ ಕೂಡ ಈ ಯುವಕರು ಕೊಡುತ್ತಿದ್ದರು. ಕೆಲವೇ ತಿಂಗಳಲ್ಲಿ ರೋಗಿಗಳು ಹೆಚ್ಚಾಗಿ, ಜಂಗಮವಾಡಿಯ ಮನೆ ಸಾಲದಾಯಿತು.

ಯುವಕರು ಹೆಚ್ಚಿನ ಸ್ಥಳಾವಕಾಶವಿರುವ ಕಟ್ಟಡಕ್ಕಾಗಿ ಹುಡುಕಲಾರಂಭಿಸಿದರು. ೧೯೦೧ನೇ ಫೆಬ್ರವರಿಯಲ್ಲಿ ದಶಾಶ್ವಮೇಧ ಘಾಟ್ ರಸ್ತೆಯಲ್ಲಿ ದೊಡ್ಡದೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡರು. ಆಸ್ಪತ್ರೆಯನ್ನು ಈ ಜಾಗಕ್ಕೆ ವರ್ಗಾಯಿಸಿದರು. ಈ ಮನೆಗೆ ತಿಂಗಳಿಗೆ ಹನ್ನೆರಡು ರೂಪಾಯಿ ಬಾಡಿಗೆ. ಇಲ್ಲಿಯೂ ಜಾಗ ಸಾಲದೆ ಪುನಃ ಬೇರೆ ಮನೆ ಹುಡುಕುವಾಗ ೧೯೦೧ ಜೂನ್ ತಿಂಗಳಲ್ಲಿ ರಾಮಾಪುರದಲ್ಲಿ ಒಂದು ಹಳೆಯದಾದ ದೊಡ್ಡ ಮನೆ ಸಿಕ್ಕಿತು. ಇದು ಮುಖ್ಯ ರಸ್ತೆಯಿಂದ ಸ್ವಲ್ಪ ಒಳಗೆ ಇತ್ತು. ಹಾಗಾಗಿ ಬಾಡಿಗೆ ಸ್ವಲ್ಪ ಕಡಿಮೆಯಿತ್ತು. ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆಯ ಮನೆಗೆ ಈ ಆಸ್ಪತ್ರೆ ಸ್ಥಳಾಂತರಿಸಲಾಯಿತು. ಸುಮಾರು ಹದಿನೆಂಟು ತಿಂಗಳು ೬೪೦ಕ್ಕಿಂತಲೂ ಹೆಚ್ಚು ಜನರು ಸೇವಾಭಾಗ್ಯವನ್ನು ಪಡೆದುಕೊಂಡಿದ್ದರು.

ವೀರಸಂನ್ಯಾಸಿ ಸ್ವಾಮಿ ವಿವೇಕನಂದರು ಪಾಶ್ಚಾತ್ಯ ದೇಶಗಳಲ್ಲಿ ದಿಗ್ವಿಜಯ ಮುಗಿಸಿ ಭಾರತಕ್ಕೆ ಬಂದವರು ಕಾಶಿಗೆ ಬರುವವರಿದ್ದರು. ವಿಷಯ ತಿಳಿದ ಯುವಕರಿಗೆ ಅತ್ಯಂತ ಸಂತೋಷಗೊಂಡು ಆನಂದತುಂದಿಲರಾದರು. ಸ್ವಾಮೀಜಿಯವರ ತಂಗುವ ವ್ಯವಸ್ಥೆ ನೋಡಿಕೊಳ್ಳುವುದಕ್ಕಾಗಿ ಸ್ವಾಮಿ ಶಿವಾನಂದಜಿ ಮತ್ತು ಸ್ವಾಮಿ ನಿರಂಜನಾನಂದಜಿಯವರು ಮೊದಲೇ ಕಾಶೀಧಾಮಕ್ಕೆ ಬಂದಿದ್ದರು.

೧೯೦೨ರ ಫೆಬ್ರವರಿಯಲ್ಲಿ ಸ್ವಾಮೀಜಿ ಕಾಶಿಗೆ ಬಂದರು. ಅವರನ್ನು ಬರಮಾಡಿಕೊಳ್ಳಲು ಚಾರುಚಂದ್ರ, ಹರಿನಾಥ ಇತ್ಯಾದಿ ಯುವಕರು ಮೊಗಲ ಸರಾಯಿ (ಈಗ ಪಂಡಿತ ದೀನದಯಾಳ) ರೈಲು ನಿಲ್ದಾಣಕ್ಕೆ ಹೋಗಿದ್ದರು. ಕಾಶಿಯಲ್ಲಿ ಶ್ರೀ ಕಾಳೀಕೃಷ್ಣ ಠಾಕೂರ್ ಎಂಬುವರ ಮನೆಯಲ್ಲಿ ಸ್ವಾಮೀಜಿ ಅತಿಥಿಯಾಗಿ ಉಳಿದುಕೊಂಡಿದ್ದರು. ಸ್ವಾಮೀಜಿಯವರ ಜೊತೆ ಜಪಾನ್ ಸರಕಾರದ ಶ್ರೀ ಓಕಾಕುರ, ಸ್ವಾಮಿ ಬೋಧಾನಂದ ಮತ್ತು ಸ್ವಾಮಿ ನಿರ್ಭಯಾನಂದ ಕೂಡ ಇದ್ದರು. ಇದೇ ಸಂದರ್ಭದಲ್ಲಿ ಚಾರುಚಂದ್ರ ಮುಂತಾದ ಯುವಕರಿಗೆ ಮಂತ್ರದೀಕ್ಷೆಯನ್ನು ಸ್ವಾಮೀಜಿ ಕೊಟ್ಟರು. ಯುವಕರನ್ನು ಉದ್ದೇಶಿಸಿ ಹೇಳಿದರು, ''ಬಡವರು, ದೀನರು, ಆರ್ತರು, ದರಿದ್ರರಿಗೆ ಮಾಡುವ ಸೇವೆಯು ನೇರ ಭಗವಂತನ ಸೇವೆಯೇ ಆಗುತ್ತದೆ. ಒಬ್ಬ ಶುದ್ಧ ಸತ್ವ ಬ್ರಹ್ಮಚಾರಿಯು ಜಪ-ಧ್ಯಾನ ಸಾಧನೆ ಮಾಡಿ ಹೇಗೆ ಮುಕ್ತನಾಗುವನೋ ಹಾಗೆಯೆ ಒಬ್ಬ ಕರ್ಮಯೋಗಿಯೂ ಮೇಲಿನವರ ಸೇವೆ ಮಾಡಿ ಮುಕ್ತನಾಗಬಹುದು. ಅಹಂಕಾರ, ಆಸೆ, ಆಕಾಂಕ್ಷೆಗಳೆಲ್ಲವನ್ನೂ ತ್ಯಜಿಸಿ – ಆಗಲೇ ಜೀವಸೇವೆಯು ಶಿವ ಸೇವೆ ಆಗುತ್ತದೆ. ನಿಮ್ಮ ಪ್ರತಿ ಚಟುವಟಿಕೆಯೂ ದಯೆಯಿಂದ ಇರಲಿ. ಪ್ರತಿಯೊಬ್ಬ ವ್ಯಕ್ತಿಯ ಎದುರು ಕೂಡ ವಿನೀತರಾಗಿರಿ. ಭಗವಂತನನ್ನು ಬಿಟ್ಟು ಬೇರೆ ಯಾರೂ ಬಿಡುಗಡೆ ಭಾಗ್ಯ ಕೊಡಲಾರ. ಕರ್ಮವೇ ಧರ್ಮವಾಗಲಿ. ಬಡವರಿಗಾಗಿ ಬಂದ ಪ್ರತಿಯೊಂದು ವಸ್ತುವೂ ಕೂಡ, ನಿಮ್ಮ ರಕ್ತದ ಹನಿಯಂತೆ ಭಾವಿಸಿ.'' ಈ ಸಂಸ್ಥೆಗೆ ವಿವೇಕಾನಂದರು ಹೋಮ್ ಆಫ್ ಸರ್ವಿಸ್ (ಸೇವೆಯ ಮನೆ) ಎಂಬ ಹೊಸ ಹೆಸರನ್ನು ಕೊಟ್ಟರು. ಮುಂದೆ ಬೇಲೂರು ಮಠಕ್ಕೆ ಹಸ್ತಾಂತರವಾದಾಗ ''ರಾಮಕೃಷ್ಣ ಮಿಷನ್ ಹೋಮ್ ಆಫ್ ಸರ್ವಿಸ್'' ಎಂದಾಯಿತು. ಶಿಷ್ಯರ ವಿನಂತಿಯ ಮೇರೆಗೆ ಸ್ವಾಮೀಜಿಯವರೇ ಸ್ವತಃ ಒಂದು ಅಪೀಲನ್ನು ಬರೆದು ಕೊಟ್ಟರು. ಈ ಅಪೀಲನ್ನು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯಲ್ಲಿ ನೋಡಬಹುದು. ಈ ಅಪೀಲಿನ ಪ್ರಭಾವದಿಂದ ಸೇವಾಶ್ರಮಕ್ಕೆ ದೇಣಿಗೆ ಬರಲಾರಂಭಿಸಿತು.

ಗುರುಮಹಾರಾಜರ ಆಶ್ರಮವು ಒಂದು ಬದಿ, ರೋಗಿ ನಾರಾಯಣರ ಚಿಕಿತ್ಸೆಗೆ ಆಸ್ಪತ್ರೆ ಇನ್ನೊಂದು ಬದಿ ಇರಬೇಕು ಎಂದು ಸ್ವಾಮಿ ವಿವೇಕಾನಂದರ ಇಚ್ಛೆಯಾಗಿತ್ತು. ಸೇವಾವ್ರತಿಗಳು, ಸಾಧುಗಳು ಆಶ್ರಮದಲ್ಲಿ ಪೂಜೆ, ಪಾಠ, ಜಪಧ್ಯಾನ ಮಾಡಲಿ ಮತ್ತು ಉಳಿದ ಸಮಯದಲ್ಲಿ ರೋಗಿ ನಾರಾಯಣರ ಸೇವೆ ಮಾಡಲಿ ಎಂದು ಅವರು ಬಯಸಿದ್ದರು. ಸ್ವಾಮೀಜಿಯವರ ಅಪೇಕ್ಷೆ ಒಂದೆರಡು ವರ್ಷದಲ್ಲಿಯೇ ನೆರವೇರಿತು.

ರಾಜಾ ಉದಯ ಪ್ರತಾಪ ಸಿಂಹನು ವಂಗ ದೇಶದ ರಾಜ. ಆತ ಸಂನ್ಯಾಸ ಸ್ವೀಕರಿಸಿ ದುರ್ಗಾಕುಂಡದ ಹತ್ತಿರ ಮನೆಮಾಡಿಕೊಂಡು ಧ್ಯಾನ-ಜಪಗಳಲ್ಲಿ ತೊಡಗಿದ್ದ. ಆತನಿಗೆ ಸ್ವಾಮಿ ವಿವೇಕಾನಂದರನ್ನು ನೋಡುವ ಹಂಬಲ. ಆದರೆ ಅವನು ತನ್ನ ಮನೆಯ ಆವರಣವನ್ನು ಬಿಟ್ಟು ದೂರ ಹೋಗುವುದಿಲ್ಲವೆಂದು ಸಂಕಲ್ಪ ಮಾಡಿಕೊಂಡಿದ್ದ. ತನ್ನ ಹಂಬಲವನ್ನು ಸ್ನೇಹಿತ ಗೋವಿಂದಾನಂದರ ಮೂಲಕ ಸ್ವಾಮೀಜಿಯವರಲ್ಲಿ ನಿವೇದಿಸಿದ. ಸ್ವಾಮೀಜಿ ಆತನ ಅಪೇಕ್ಷೆಯಂತೆ ತಾನೇ ದುರ್ಗಾಕುಂಡಕ್ಕೆ ಹೋಗಿ ಸಂನ್ಯಾಸಿ ರಾಜನನ್ನು ಭೇಟಿ ಮಾಡಿದರು. ಅವರ ಜೊತೆ ವೇದಾಂತ ತತ್ತ್ವದ ಬಗ್ಗೆ ಸುದೀರ್ಘವಾಗಿ ವಿಚಾರವಿನಿಮಯ ಮಾಡಿದರು. ಕಾಶೀಧಾಮದಲ್ಲಿ ವೇದಾಂತ ಚರ್ಚೆಗೆ ಒಂದು ಆಶ್ರಮ ಇರಬೇಕೆಂದು ರಾಜನಿಗೂ ಒಂದು ಆಸೆ ಇತ್ತು. ಆತ ಸ್ವಾಮೀಜಿಗೆ ಐನೂರು ರೂಪಾಯಿ ಧನ ಸಹಾಯ ಮಾಡಿದ. ಸ್ವಾಮೀಜಿ ಆ ಹಣವನ್ನು ಸ್ವಾಮಿ ಶಿವಾನಂದರಗೆ ಹಸ್ತಾಂತರಿಸಿದರು. ಅದೇ ಈಗ ವಾರಾಣಸಿಯ 'ರಾಮಕೃಷ್ಣ ಅದ್ವೈತ ಆಶ್ರಮ'ವಾಗಿದೆ.

*(ಮುಂದುವರಿಯುವುದು)*